ಎಂದು ವಿರುಪಾಕ್ಷಿ ಒಂದು ರೀತಿಯ ವೈರಾಗ್ಯಭಾವದಲ್ಲಿ ಹೌದೋ ಅಲ್ಲವೋ ಎಂಬಂತೆ ನಕ್ಕ. ಪ್ರೀತಂ ಕೂಡ ಸಣ್ಣಕ್ಕೆ ನಕ್ಕ. ಆ ಚಿಕ್ಕ ನಗು ಇಬ್ಬರ ಮುಖದಲ್ಲಿಯ ಮಣ ಭಾರವನ್ನು ಸ್ವಲ್ಪವಾದರೂ ಕೆಳಗಿಳಿಸಿತು. ಇಬ್ಬರೂ ಅಪ್ಪಿಕೊಂಡರು. ಆ ತುದಿಯಲ್ಲಿದ್ದರೂ ಈ ತುದಿಯತ್ತಲೆ ಗಮನವಿದ್ದ ಸುಮಿ ಇಬ್ಬರ ಮುಖದಲ್ಲೂ ಕಿರುನಗೆಯನ್ನು ಕಂಡಳು.



'ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿ ದೋಣಿ...' ಎಂಬ ಕವಿಸಾಲು ನೆನಸಿಕೊಳ್ಳುತ್ತ ಅವರ ಸನಿಹಕ್ಕೆ ಬಂದಳು. ಅವಳ ಹಿಂದೆಯೇ ಲಿಂಗನಗೌಡ ಪಾಟೀಲರ ಗುಂಪಿನಿಂದ ಒಬ್ಬೊಬ್ಬರೇ ಪ್ರೀತಂನತ್ತ ಬಂದು ಸೇರಿಕೊಂಡರು! ಈಗ ಪ್ರೀತಂನನ್ನು ಕೇಂದ್ರವಾಗಿಟ್ಟುಕೊಂಡು ಸಂತಾಪ ಪಟ್ಟುಕೊಂಡರು. ದೂರದ ಸಮುದ್ರವೂ ಸಂತ್ರಸ್ತ ಮನಸ್ಸುಗಳನ್ನು ಸಂತೈಸುವ ಆತುರದಿಂದ ಅಲೆಗಳಿಗೆ ರೆಕ್ಕೆಹಚ್ಚಿಕೊಂಡು ಬರುತ್ತಿದೆಯೇನೋ ಅನಿಸುತ್ತಿತ್ತು. ಹಗಲಲ್ಲಿ ಹೊತ್ತಿ ಉರಿದು ಖಾಲಿಯಾದ ಸೂರ್ಯನು ದಾರಿ ಬೆಳಕಿಗೆ ಉಳಿಸಿಕೊಂಡ ಮುಸ್ಸಂಜೆ ಬೆಳಕನ್ನು ಈ ಸಂತ್ರಸ್ತರ ಮೇಲೇ ಇಳಿಸಿದಂತೆ ಕಾಣುತ್ತಿತ್ತು!

***

'ನಮ್ಮೂರಿಗೆ ಬಂದು ಎಂಥ ಆಘಾತ ಆಗಿಹೋಯ್ತು... ಏನ್ ಹೇಳೂಕೂ ಬಾಯೇ ಬರೂದಿಲ್ಲ' ಎಂದು ಗುಲಾಬಿ ವ್ಯಥೆಪಟ್ಟಳು. ನೀಲವ್ವ 'ಆಕಿ ಹಣ್ಯಾಗ್ ಸಮುದ್ರಕ್ ಬಂದು ಜೀವ ಬಿಡೋದ ಐತಿ, ನೀವ್ ಸಮಾಧಾನ ಮಾಡ್ಕಳ್ಳಿ ಅಕ್ಕೋರೆ' ಎಂದಳು. ಲಿಂಗನಗೌಡ ಪಾಟೀಲರ ಅರ್ಧ ಕುಟುಂಬ, ಗುಲಾಬಿಯ ಬಳಗದವರು, ಗಂಡನ ಕಡೆಯ ದಾಯಾದಿಗಳು, ಪ್ರೀತಂನ ಗೆಳೆಯರು ಎಲ್ಲರೂ ಗುಲಾಬಿಯ ಗುಡಿಸಲಲ್ಲಿ ಸೇರಿದ್ದರು. ಪ್ರೀತಂನ ಮಾವ ದೂರದಿಂದ ಬಂದವರಿಗೆ ಕೆಂದಾಳಿ ಸೀಯಾಳ ಕೊಯ್ಸಿದ್ದ. ಮನೆ ಹಿಂದಿನ ಕರಿಬಾಳೆ ಕೊನೆ ಕಡಿದಿಟ್ಟದ್ದು ಪೂರ್ತಿ ಹಣ್ಣಾಗಿತ್ತು. ನಾಲ್ಕು ದಿನಗಳಿಂದ ಯಾರಿಗೂ ಅದರ ಲಕ್ಷ್ಯ ಇರಲಿಲ್ಲ. ಗುಲಾಬಿಯ ಬೈತಕೋಲದ ಅತ್ತಿಗೆ ಮಾಡಿಗೆ ತೂಗಿಟ್ಟ ಕೊನೆ ಇಳಿಸಿ ಎಲ್ಲರಿಗೂ ಒಂದೊಂದು ಹಂಚಿದಳು. ಗುಲಾಬಿ 'ನಮ್ಮಿಂದ ತಪ್ಪಾಗಿದ್ರೆ ಕ್ಷಮಿಸಬೇಕು. ನಾವ್ ಬಡವರು ಖರೆ. ಆದ್ರೆ ಹುಡುಗ ಮತ್ತು ಹುಡುಗಿ ಏನೋ ಪ್ರೀತಿ ಮಾಡ್ಕೊಂಡ್ಬಿಟ್ಟಿದ್ದಾರೆ. ದೊಡ್ಡ ಮನಸ್ ಮಾಡಿ ಮಕ್ಕಳ ಮನಸ್ಸಂತೆ ನಡ್ಸಕೊಡಬೇಕು' ಎಂದು ಕೈ ಮುಗಿದಳು. ಲಿಂಗಣ್ಣ ಸಣ್ಣ ಧ್ವನಿಯಲ್ಲಿ 'ಅದೇ ಈಗ ನಾವು ಶೈಲುಳ ಆತ್ಮಶಾಂತಿಗಾಗಿ ಮಾಡಬಹುದಾದ ಕಾರ್ಯ, ವೈನಿ' ಎಂದ. 'ಶೈಲು ಆತ್ಮಕ್ಕೆ ಯಾವ ಶಾಂತಿಯ ಅಗತ್ಯವೂ ಇಲ್ಲ, ಅವಳು ಅಂಥದ್ದನ್ನು ಎಂದೋ ಮೀರಿದವಳು. ಬದುಕಿದ್ದಾಗಲೇ ಅದನ್ನು ಹಾಸಿಲ್ ಮಾಡಿಕೊಂಡಾಕಿ. ಮನಃಶಾಂತಿ ಬೇಕಿರುವುದು ಬದುಕಿರುವ ನಮಗೆ' ಎಂದಳು ನೀಲವ್ವ. ಅವಳ ಧ್ವನಿ ಕಂಪಿಸುತ್ತಿತ್ತು. ಲಿಂಗಣ್ಣ ಗುಲಾಬಿಗೆ 'ನಮ್ಮಾಕಿ ಹೇಳೋದು ಖರೇನೇ ಐತಿ. ಇರಲಿ, ಮಕ್ಕಳು ಸದ್ಯ ಓದು ಮುಗಿಸಿ ತಮ್ಮತಮ್ಮ ಭವಿಷ್ಯ ರೂಪಿಸಿಕೊಳ್ಳಲಿ... ಮುಂದೆ ಅವರಿಷ್ಟದಂತೆ ಆಗಲಿ' ಎಂದ.

ಲಿಂಗನಗೌಡ ಪಾಟೀಲರ ಕುಟುಂಬದವರೆಲ್ಲರೂ ಮಾರನೇ ದಿನ ಕಲಬುರಗಿಗೆ ವಾಪಸ್ಸು ಹೊರಟಿದ್ದರು. ಒಂದು ರೀತಿಯ ವೈರಾಗ್ಯಭಾವವು ಅವರ ದುಃಖವನ್ನು ಸ್ವಲ್ಪಮಟ್ಟಿಗೆ ಸಹ್ಯಗೊಳಿಸಿತ್ತು. ಪ್ರೀತಂ ಅವರಿಗೆ ಸಿಗಲು ಬೆಳಗ್ಗೆ ಲಾಡ್ಜಿಗೆ ಹೋಗಿದ್ದ. ಪ್ರೀತಂನ ಗೆಳೆಯರು, ಸುಮಿಯ ಕಾಲೇಜಿನ ಕ್ಲಾಸ್‌ಮೇಟುಗಳೂ ಬಂದಿದ್ದರು. ಲಿಂಗಣ್ಣ 'ನಾಗತಿಹಳ್ಳಿ ಸಾಯಬ್ರಿಗೆ ಶೈಲು ಸುದ್ದಿ ಗೊತ್ತಾತು ಕಾಣಿಸ್ತೈತಿ, ರಾತ್ರಿ ಫೋನ್ ಮಾಡಿದ್ರು' ಅಂದರು. 'ಹೌದು, ನನಗೂ ಮಾಡಿದ್ರು. ತುಂಬಾ ಬೇಜಾರ್ ಮಾಡ್ಕಂಡ್ರು' ಅಂದ ಪ್ರೀತಂ. 'ಮತ್ತೆ ನಿಂಗ್ಯಾವಾಗ ಬೆಂಗಳೂರಿಗೆ ಬಾ ಅಂದಾರ?' ಅಂದರು. 'ಒಂದು ವಾರ ಬಿಟ್ಟು ಹೋಗ್ತೇನೆ' ಅಂದ. ನೀಲವ್ವ 'ಹುಷಾರಪ್ಪ' ಎಂದರು. ಸುಮಿ 'ಟೇಕ್ ಕೇರ್ ಪ್ರೀತ್' ಅಂದಳು. ಪ್ರೀತಮ್ 'ನಿನ್ನನ್ನು ರಾಶಿ ಮಿಸ್ ಮಾಡ್ಕೊಳ್ಳುವೆ' ಎಂದ. 'ನೀನು ನನ್ನೊಬ್ಬಳನ್ನೇ ಮಿಸ್ ಮಾಡಕೊಳ್ಳಿ. ನಾನು ಮೂರಮೂರು ಮಿಸ್ ಮಾಡ್ಕೊಳ್ಳಬೇಕಲ್ಲೊ, ಮಾರಾಯ' ಅಂದಳು. ಪ್ರೀತಂ ಪ್ರಶ್ನಾರ್ಥಕವಾಗಿ ಅವಳತ್ತ ನೋಡಿದ. 'ನೀ ಎಷ್ಟು ಮೀನ್ ತಲಿ ತಿಂದ್ರೂ ಅಷ್ಟೇ ಬಿಡು' ಅಂದಳು ಸಣ್ಣದನಿಯಲ್ಲಿ. 'ಕೇಳಿಲ್ಲಿ, ನನ್ನ ಹೃದಯವೇ ಆಗಿದ್ದ ಶೈಲತ್ತೆಯನ್ನು ಕಳಕೊಂಡೆ. ಇನ್ಮುಂದೆ ನನ್ನ ಜೀವದಂಥ ಸಮುದ್ರ ಕೂಡ ಸಮೀಪವಿರಲ್ಲ. ಮತ್ತು ಕಡಲ ತೀರದ ಹುಡುಗನೂ ದೂರ ಹೋಗ್ತಾನೆ... ಲೈಫಲ್ಲಿ ಫಸ್ಟ್ ಟೈಮ್ ಅನಾಥಪ್ರಜ್ಞೆ ಕಾಡ್ತಿದೆಯಲ್ಲೋ' ಅಂದಳು. ಅವಳ ಮಾತಿಗೆ ಅಲ್ಲಿದ್ದವರ ಕಣ್ಣುಗಳು ಹಸಿಯಾದವು. ನೀಲವ್ವ ಮಗಳನ್ನು ಅಪ್ಪಿಕೊಂಡು ಅತ್ತೇ ಬಿಟ್ಟಳು. ಲಿಂಗಣ್ಣನವರ ಕಣ್ಣುಗಳಲ್ಲೂ ನೀರಾಡಿತು. ಪ್ರೀತಂನಿಗೆ ಒಡಲಲ್ಲಿ ಸಂಕಟ ಉಂಟಾಯಿತಾದರೂ, ವಿದಾಯವನ್ನು ಹೀಗೆ ಕಣ್ಣೀರಾಗಿಸುವುದು ಬೇಡ ಅನಿಸಿ ಅವಳ ಕಾಲೆಳೆಯಲು, 'ಇಂಥ ಅನಾಥಪ್ರಜ್ಞೆಯಿಂದ ಆ ಹಾರಿಕೊಳ್ಳುವ ಪಾಯಿಂಟಿಗೆ ಹೋಗಬೇಡಾ ಮತ್ತೆ' ಎಂದ. 'ಹೇ ಕೋತಿ, ಹಾರ್ಕೊಳ್ಳೋಕೇನು ಹುಚ್ಚಾ? ಲೈಫು ಇಷ್ಟು ಬ್ಯೂಟಿಫುಲ್ ಐತಿ. ಈ ಘೋರ ಆಘಾತದಿಂದ ಚೇತರಿಸಿಕೊಳ್ಳಲು ಸಮಯ ಬೇಕಾಗಬಹುದು, ನಿಜ. ಆದರೆ ನನ್ನೊಳಗೆ ಶೂನ್ಯಕ್ಕೆ ಜಾಗವಿರಲಾರದು. ಮನಸ್ಸಿನ ದುರ್ಬಲ ಗಳಿಗೆ ದಾಟುವುದನ್ನು ಶೈಲತ್ತೆಯಿಂದ ಕಲಿತಿದ್ದೇನೆ. ಶೈಲತ್ತೆ ನೀರಲ್ಲಿ ಮುಳುಗಿದ್ದರೂ ಕಡಲಿಗೆ ಪ್ರೇಮದ ಸುಗಂಧ ಬೆರೆಸುವಂಥವಳು' ಎಂದಳು. ಪ್ರೀತಂನ ಗೆಳೆಯರು ಮತ್ತು ಸುಮಿಯ ಕ್ಲಾಸಮೇಟ್ಸ್ ಅವಳ ಮಾತಿಗೆ ಮೆಲುವಾಗಿ ಕ್ಲ್ಯಾಪ್ಸ್ ಮಾಡಿದರು. ಪ್ರೀತಂ ಅವಳನ್ನು ಹಗುರವಾಗಿ ಹಗ್ ಮಾಡಿ 'ಸಿಗೋಣ ಸು' ಎಂದ. ಅವಳು 'ಬೇಗ ಸಿಗೋಣ, ಪ್ರೀತ್' ಎಂದು ಬೀಳ್ಕೊಟ್ಟಳು.

***

ಇಲ್ಲಿಗೇ ಮುಗಿದರೆ ಕತೆ ಸುಖಾಂತವೋ ದುಃಖಾಂತವೋ ತಿಳಿಯದೇ ಹೋಗಬಹುದು. ಪ್ರೇಮಕತೆ ವಿಷಾದದಲ್ಲಿ ಕೊನೆಗೊಳ್ಳಬಾರದು ಎಂದು ಶೈಲತ್ತೆ ಹೇಳುತ್ತಿದ್ದಳು. ಮುಂದೆ ಆದುದನೆಲ್ಲ ಬರೆದರೆ ಅದು ಸುಖಾಂತವೇ ಅನಿಸಬಹುದು. ಬಹುಶಃ ಇನ್ನೊಂದು ಕಾದಂಬರಿಯೇ ಆದೀತು. ಸದ್ಯಕ್ಕೆ ಸಂಕ್ಷಿಪ್ತವಾಗಿ ಇಷ್ಟು ಹೇಳಬಹುದು:

ನಾಗತಿಹಳ್ಳಿಯವರ ಸಿನಿಮಾ ಬಿಡುಗಡೆ ಆದಾಗ ಅವರ ಎಲ್ಲಾ ಸಿನಿಮಾಗಳಂತೆ ಮಾಸ್ ಮತ್ತು ಕ್ಲಾಸ್ ಮೆಚ್ಚುಗೆ ಗಳಿಸಿತು. ಕತೆ, ನಿರ್ದೇಶನ, ಹಾಡುಗಳು, ಕಡಲತೀರದ ಸುಂದರ ದೃಶ್ಯಗಳ ಜೊತೆಗೆ ಪ್ರೀತಂನ ಫ್ರೆಶ್‌ನೆಸ್ ಕೂಡ ಪ್ರಶಂಸೆ ಪಡೆಯಿತು. ಅಭಿನಯದಲ್ಲೂ ಸುಧಾರಿಸಿ ಹೊಸ ಹೊಸ ಅವಕಾಶಗಳೂ ಸಿಕ್ಕಿದ್ದರಿಂದ, ಪ್ರೀತಂ ಸಿನಿಮಾ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ. ಯಶಸ್ಸೂ ಗಳಿಸಿದ. ಈಗ ಅವನು ತೆಲುಗು ಚಿತ್ರರಂಗದಲ್ಲೂ ಜನಪ್ರಿಯತೆ ಗಳಿಸಿರುವನು. ಸುಮಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಅಪರೂಪದ ವಿಷಯದ ಮೇಲೆ ಸಂಶೋಧನೆ ಕೈಗೊಂಡು ಪಿಎಚ್.ಡಿ. ಮುಗಿಸಿದಳು. ಅವಳ ಪ್ರಬಂಧಗಳು ಅಂತರರಾಷ್ಟ್ರೀಯ ಜರ್ನಲ್ಲುಗಳಲ್ಲಿ ಪ್ರಕಟವಾಗಿ ಹೆಸರೂ ಬಂತು. ಅಕಡೆಮಿಕ್ ವಲಯದಲ್ಲಿ ಅವಳ ಉಪನ್ಯಾಸಗಳಿಗೆ ಬೇಡಿಕೆಯಿರುವುದರಿಂದ ಸುಮಿ ದೇಶ ವಿದೇಶ ಸುತ್ತುತ್ತಿರುತ್ತಾಳೆ. ಅವರ ಮದುವೆ